# 1ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಚನ್ನರಾಯಪಟ್ಟಣ

ಸಿ.ಸಿ.1604/2017

ಪ್ರಮಾಣ ವಚನ ಬೋಧಿಸಲಾಯಿತು

**ಸಾಕ್ಷಿದಾರರ ಹೆಸರು** ಃ ದೇವರಾಜು ಚಾಸಾ- 6

**ತಂದೆಯ ಹೆಸರು** ಃ ಕೆಂಪೇಗೌಡ ಪ್ರಾಸಾ- 8

**ವಯಸ್ಸು** ಃ 56 ವರ್ಷ

**ಉದ್ಯೋಗ** ಃ ವ್ಯವಸಾಯ

**ವಾಸ** ತರಬೇನಹಳ್ಳಿ ದಿನಾಂಕಃ 19.05.2026

**ಮುಖ್ಯ ವಿಚಾರಣೆ ಃ- ಎ.ಪಿ.ಪಿ. ಯವರಿಂದ**

ಈಗ ನೋಡುತ್ತಿರುವ ಸಹಿಯು ನನ್ನದಾಗಿರುತ್ತದೆ. ನಿಪಿ-**2** ಮತ್ತು **3**ಕ್ಕೆ **4** ವರ್ಷಗಳ ಹಿಂದೆ ನಮ್ಮ ಊರಿನಲ್ಲಿ ಪೊಲೀಸ್ ರವರು ಮಹಜರ್ ನ್ನು ಜರುಗಿಸಿಸಲು ಬಂದಿದ್ದಾಗ ಸಹಿ ಮಾಡಿದ್ದು ನನ್ನ ಜೊತೆಗೆ ಚಾಸಾ-**5**ರವರು ಸಹಿ ಮಾಡಿದ್ದು, ನನ್ನ ಸಮಕ್ಷಮ ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಸಾಕ್ಷಿಯು ನಿಪಿ-**2, 3** ರಲ್ಲಿ ಇರುವ ಸಹಿಯನ್ನು ಗುರುತಿಸಿದ್ದು ಅವುಗಳನ್ನು ನಿಪಿ-**2**(ಡಿ), ನಿಪಿ-**3**(ಡಿ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು** ಭಾಗಶಃ **ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ನುರಿತ ಎಪಿಪಿ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ.** ದಾಖಲೆಗಳನ್ನು ಪರಿಶೀಲಿಸಿ **ಸಾಕ್ಷಿಯನ್ನು** ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ **ಪಾಟೀ ಸವಾಲು ಮಾಡಲು ಅನುಮತಿ**ಸಲಾಯಿತು)

**ಪಾಟೀ ಸವಾಲು ಃ-** ಶ್ರೀಮತಿ ಎ.ಪಿ.ಪಿ ರವರಿಂದ

ದಿಃ **15.09.2017** ರಂದು ಮಂಜೇಗೌಡರವರ ತೋಟದ ಮುಂಭಾಗ ಚಾಸಾ-**1**ರವರು ತೋರಿಸಿದ ಸ್ಥಳದಲ್ಲಿ ಒಂದು ದೊಣ್ಣೆಯನ್ನು ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ಸದರಿ ಮಹಜರ್ ನ್ನು ಬೆ **10.00** ರಿಂದ **11.00**ವರಿಗೂ ಮಾಡಿದ್ದು ನನ್ನ ಜೊತೆ ಚಾಸಾ-**1** ರವರು ಸಹಿ ಮಾಡಿರುತ್ತಾರೆ ಎಂದರೆ ಸರಿ. ಅದೇ ದಿನ ಬೆ **11.30** ರಿಂದ **12.30**ರಲ್ಲಿ ಪೊಲೀಸ್ ರವರು ರವಿಕೆ, ದೊಣ್ಣೆ, ಕಲ್ಲನ್ನು ಅಮಾನತ್ತು ಪಡಿಸಿಕೊಂಡರು ಎಂದರೆ

ಸರಿಯಲ್ಲ. ಅದಕ್ಕೆ ಚಾಸಾ-2ರವರು ಸಹಿ ಮಾಡಿರುತ್ತಾರೆ ಎಂದರೆ ಸರಿ. ನಿಪಿ-2, 3 ಹಾಗೂ ಮುಮಾಗಳ ಬಗ್ಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು: ಆರೋಪಿಯ ಪರ ವಕೀಲರಿಂದ:

ಮಹಜರ್ ಗಳಲ್ಲಿ ಇರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸ್ ರವರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಮುಮಾಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಸದರಿ ಮಹಜರ್ ಗೆ ನನ್ನ ಜೊತೆ ಯಾರು ಸಹಿ ಮಾಡಿದ್ದಾರೆ ಎಂದು ಗೊತ್ತಿಲ್ಲ ಎಂದರೆ ಸರಿ.

**ಮರು ವಿಚಾರಣೆ :- ಇಲ್ಲ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ.ಸ.ಇ.ಎ.ಒ.,**

1ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ